# ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ — ೧೯

೨ನೇ ವರ್ಷ ಸಂಚಿಕೆ ೨ ಕೊಪ್ಪ ೨೮-೮-೮೩ ಭಾನುವಾರ ಬೆಲೆ ೪೦ ಪೈಸೆ


## ಬೇಗೂರು ಕೇಳಿದರೆ ಬೇಗಾರು ಕೊಟ್ಟರು!

ಹರಿಹರಪುರ: ತಮ್ಮ ಮಕ್ಕಳ ಶಾಲಾ ಕಾಲೇಜು ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಅವರು ಕೇಳಿದ್ದು ತಮ್ಮ ಸ್ವಂತ ಊರಾದ ಬೆಂಗಳೂರು ತಾಲ್ಲೂಕಿನ **ಬೇಗೂರಿಗೆ**. ಆದರೆ ಅವರಿಗೆ ವರ್ಗವಾದದ್ದು ಇಲ್ಲಿಗೆ ಸಮೀಪದ **ಬೇಗಾರಿಗೆ!**

ಆರೋಗ್ಯ ಇಲಾಖೆಯ, ತಲೆಯಲ್ಲಿ ಹುಳುಬಿದ್ದ, ನಿದ್ದೆಗಣ್ಣಿನ ನೌಕರಶಾಹಿ ಇಲ್ಲಿ ಕಳೆದ ಏಳು ವರ್ಷಗಳಿಂದ ಸರ್ಕಾರಿ ವೈದ್ಯರಾಗಿದ್ದ ಡಾ|| ಸಿ. ಸಿದ್ದಯ್ಯನವರಿಗೆ ಮಾಡಿದ 'ಉಪಕಾರ' ಇದು.

ಈ ನಡುವೆ ಹೊಳೆನರಸೀಪುರದ ಬಳಿ ಇವರು ಹಿಂದೆ ಕೆಲವು ವರ್ಷ ವೈದ್ಯರಾಗಿದ್ದ ಹಳ್ಳಿಯವರು ಇವರಿಗೇ ಗೊತ್ತಿಲ್ಲದಂತೆ ವಿಧಾನಸೌಧದಲ್ಲಿ ಓಡಾಡಿ ಇವರನ್ನು ಪುನಃ ತಮ್ಮೂರಿಗೆ ವರ್ಗ ಮಾಡಿಸಿಕೊಂಡಿದ್ದಾರಂತೆ. ಇಷ್ಟರಲ್ಲೇ ಡಾ|| ಸಿದ್ದಯ್ಯ ಅಲ್ಲಿಗೆ ಹೊರಡಲಿದ್ದಾರೆ.

ಇಷ್ಟು ವರ್ಷ ೩-೪ ಆಸ್ಪತ್ರೆಗಳ ಕೆಲಸವನ್ನು ಒಬ್ಬರೇ ಊಟ-ನಿದ್ರೆ ಬಿಟ್ಟು ನಿರ್ವಹಿಸಿದ ಸಿದ್ದಯ್ಯನವರಿಗೆ ಅವರು ಕೇಳಿದ ಊರಿಗೇ ವರ್ಗವಾಗಿದ್ದರೆ ಅವರನ್ನು ಕಳೆದುಕೊಳ್ಳುತ್ತಿರುವವರಿಗೆ ಅಷ್ಟಾದರೂ ಸಮಾಧಾನವಾಗುತ್ತಿತ್ತು.

### ಬೇಲಿಯೇ ಹೊಲ ಮೇಯುತ್ತಿರುವ ಬೇಗಾರು ಶಾಲೆ

# ಕ್ಷುಲ್ಲಕ ಕಾರಣಕ್ಕೆ ಜಗಳಾಡುವ ಅಧ್ಯಾಪಕರು

[ಉಪಾಧ್ಯಾಯ ವೃತ್ತಿ ಮತ್ತು ವೈದ್ಯಕೀಯ ವೃತ್ತಿಗಳಲ್ಲಿರುವವರ ಬಗ್ಗೆ ಬರೆಯಬೇಕಾದ ಪ್ರಸಂಗ ಬಂದರೆ, "ಛೆ, ಎಂಥ ಪವಿತ್ರವಾದ, ಮಾನನೀಯವಾದ ಕೆಲಸ ಅದು. ಆ ವೃತ್ತಿಯವರ ಬಗ್ಗೆಯೂ ಬರೆಯಬೇಕೆ?" ಎಂದು ಅಳುಕಿ ಹಿಂದೇಟು ಹಾಕುವ ಕಾಲವೊಂದಿತ್ತು. ಆದರೆ ಈಗ 'ಸುಂಗುತನ'ದಿಂದ ಹಿಡಿದು ಗೂಂಡಾಗಿರಿಯವರೆಗಿನ ಎಲ್ಲಾ ಕೊಳಕುಗಳೂ ಈ ವೃತ್ತಿಗಳಲ್ಲೂ ಎಷ್ಟರ ಮಟ್ಟಿಗೆ ವರದಿಯಾಗುತ್ತಿವೆಯೆಂದರೆ ಸಮಾಜದಲ್ಲಿ ಇವುಗಳ ಬಗೆಗಿನ ಗೌರವವೇ ಅಳಿದು ಹೋಗುತ್ತಿದೆ.

ಕ್ಷುಲ್ಲಕ ಕಾರಣಗಳಿಗಾಗಿ ಅಧ್ಯಾಪಕರುಗಳು ಪರಸ್ಪರ ಕಚ್ಚಾಡುತ್ತ ಊರಿಗೆ ಕಳಂಕ, ಮಕ್ಕಳ ಭವಿಷ್ಯಕ್ಕೆ ಕುತ್ತು ತರುತ್ತಿರುವ ವರದಿಯೊಂದು ಇಲ್ಲಿದೆ— ವರದಿ: ಎಸ್. ಕೆ. ಶೃಂಗೇಶ್ವರ ]

ಬೇಗಾರು: ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿರುವ ಒಳ ಜಗಳಗಳು ಈಚೆಗೆ ತೀವ್ರವಾಗಿ, ಆ. ೨೦ ಮತ್ತು ೨೩ ರಂದು ಜಿಲ್ಲಾ ಶಿಕ್ಷಣಾಧಿಕಾರಿ ಶ್ರೀಮತಿ ಅಶೋಕ ಕುಮಾರಿಯವರು ತನಿಖೆ ನಡೆಸುವವರೆಗೆ ತಲುಪಿವೆ.

#### ಜಗಳಗಳ ಪರಂಪರೆ

ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ಇಲ್ಲಿ ಒಡಕು ಉಂಟಾಗಿದ್ದು ವರ್ಷಕ್ಕೊಬ್ಬರು ಮುಖ್ಯೋಪಾಧ್ಯಾಯರು ಬದಲಾಗುತ್ತಿದ್ದಾರೆ. ಹಿಂದೆ ಗೋವಿಂದರಾವ್ ಮುಖ್ಯೋಪಾಧ್ಯಾಯರಾಗಿದ್ದಾಗ ಹೊಸದಾಗಿ ಅಧ್ಯಾಪಕರಾಗಿ ಬಂದ ಕೃಷ್ಣಪ್ಪಗೌಡ ಎಂಬವರಿಂದ ಜಗಳ ಶುರುವಾಗಿ (ಹೊಡೆದಾಟವೂ ನಡೆದು?) ಶಾಲೆಯನ್ನು ಮೇಲಧಿಕಾರಿಗಳ ಅಪ್ಪಣೆ ಇಲ್ಲದೆ ೨ ದಿನ ಮುಚ್ಚಿದ್ದು; ಮಕ್ಕಳು ಬೆಳಗಿನಿಂದ ಸಂಜೆ ತನಕ ಜಗಲಿಯಲ್ಲಿ ಕಾಲ ಕಳೆದಿದ್ದು ಇಲ್ಲಿ ಸ್ಮರಿಸಬಹುದು.

#### ಅಗೌರವ

ಕಳೆದ ವರ್ಷ ಮುಖ್ಯೋಪಾಧ್ಯಾಯರಾಗಬೇಕಿದ್ದ ಇಲ್ಲಿನ ಹಿರಿಯ ಅಧ್ಯಾಪಕ ಎ. ಟಿ. ಗುರುಮೂರ್ತಿಯವರು ಅದರಲ್ಲಿ ನಿರಾಸಕ್ತಿ ವ್ಯಕ್ತಪಡಿಸಿದ್ದರಿಂದ ಕಿಗ್ಗದಿಂದ ಎಲ್. ತಿಮ್ಮಣ್ಣ ಗೌಡರು ಮುಖ್ಯೋಪಾಧ್ಯಾಯರಾಗಿ ಬಂದರು. (ಇಲ್ಲಿನ ಜಾತಿ ಭಾವನೆಯ ವಾತಾವರಣಕ್ಕೆ ರೋಸಿ ಗುರುಮೂರ್ತಿಯವರು ಹಾಗೆ ಮಾಡಿದರೆಂದು ಹೇಳಲಾಗುತ್ತಿದೆ. ಶಾಲಾಭಿವೃದ್ಧಿ ಸಮಿತಿಯವರೂ ಅವರನ್ನು ಆ ಹುದ್ದೆ ವಹಿಸುವಂತೆ ಹೆಚ್ಚು ಕೇಳಲಿಲ್ಲ.) ತಿಮ್ಮಣ್ಣ ಗೌಡರು ಶಾಲೆಯನ್ನು ಒಳ್ಳೆಯ ಲವಲವಿಕೆಯಿಂದ, ಶಿಸ್ತಿನಲ್ಲಿಟ್ಟಿದ್ದು, ಅಭಿವೃದ್ಧಿ ಸಮಿತಿಗೂ ಸಾಕಷ್ಟು ಹಣ ಸಂಗ್ರಹವಾಗುವಂತೆ ಮಾಡಿದ್ದಾರೆ. ಆದರೆ "ಅವರು ತಮಗಿಂತ ಹಿರಿಯರಾದ ಅಧ್ಯಾಪಕರಿಗೂ ಏಕವಚನದಿಂದ, ಅಗೌರವದಿಂದ ಮಾತಾಡಿಸುತ್ತಾರೆ; ಶಾಲೆಯ ಎಲ್ಲಾ ದಾಖಲಾತಿಗಳನ್ನೂ ನಾವು ತಯಾರಿಸುವುದಾದರೂ ತನ್ನಿಂದಲೇ ಬೈಗು-ಬೆಳಗು ಎಂಬಂತೆ ಕೊಚ್ಚಿಕೊಳ್ಳುತ್ತ ನಮ್ಮ ಬಗ್ಗೆ ಹೊರಗಡೆ ಲಘುವಾಗಿ ಮಾತಾಡುತ್ತಾರೆ" ಎಂದು ಹಿರಿಯ ಅಧ್ಯಾಪಕರ ಆಕ್ಷೇಪ.

(೪ನೇ ಪುಟಕ್ಕೆ)

## "ಬೀದಿ ದೀಪ ಬೇಕು"

ಶಾಂತಿಗ್ರಾಮ: ಕೊಗ್ರೆಯಿಂದ ಅಬ್ಬಿಕಲ್ ವರೆಗಿನ ರಸ್ತೆಯಲ್ಲಿ ದೀಪವಿಲ್ಲದೆ ಕತ್ತಲೆಯಾದ ಮೇಲೆ ತಿರುಗಾಡುವವರಿಗೆ ಬಹಳ ತೊಂದರೆಯಾಗಿದೆ, ಸಂಬಂಧಪಟ್ಟವರು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು—ಎಂದು ಕೊಗ್ರೆಯ ನಾಗರಿಕರು ಒತ್ತಾಯಿಸಿದ್ದಾರೆ.

---

ಚಿಕ್ಕಮಗಳೂರು: ಜಿಲ್ಲೆಯ ಕೊಪ್ಪ, ನರಸಿಂಹರಾಜಪುರ, ಮೂಡಿಗೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ೧೯೮೩-೮೪ನೇ ಸಾಲಿನ ಮುಂಗಾರಿನ ಭತ್ತದ ಬೆಳೆಗೆ ೫.೨೫ ಲಕ್ಷ ರೂ. ವಿಮೆ ಮಾಡಿಸುವ ಗುರಿ ನಿಗದಿ ಪಡಿಸಲಾಗಿದೆ.

## ಗುಂಡಿಬಿದ್ದ ಹೊಸ ರಸ್ತೆ, ತುಂಡಾದ ಹಳೇ ರಸ್ತೆ: ವಾಹನಗಳಿಗೆ ಖೆಡ್ಡಾ!

(ನಮ್ಮ ಪ್ರತಿನಿಧಿಯಿಂದ)

ಬಿದರಗೋಡು: ಇಲ್ಲಿಂದ ಸುಮಾರು ಅರ್ಧ ಕಿ.ಮೀ. ದೂರದ ದೊಸಳ್ಳಿಯ ಹೊಸ ಸೇತುವೆಗೆ ಸಂಪರ್ಕ ಕಲ್ಪಿಸುವ ಹೊಸ ರಸ್ತೆ ಟಾರು ಹಾಕದ್ದರಿಂದ ಕಂಡಾಪಟ್ಟೆ ಗುಂಡಿ ಬಿದ್ದು ವಾಹನಗಳ ಓಡಾಟ ಬಹಳ ಕಷ್ಟಕರವಾಗಿದೆ. ಆ ಕಡೆ ಹಳೇ ರಸ್ತೆಯಲ್ಲಿದ್ದ ಮೋರಿ ಮುರಿದು ೧೦ ಅಡಿ ಹೊಂಡ ಬಿದ್ದಿದೆ. ಹೊಸದಾಗಿ ಆ ರಸ್ತೆಯಲ್ಲಿ ಬರುವ ವಾಹನಗಳು ಗುಂಡಿ ಬಿದ್ದ ರಸ್ತೆಯಲ್ಲಿ ಹೋಗಲಾಗದೆ ಹಳೇ ರಸ್ತೆಯಲ್ಲೇ ಹೋಗಲು ಆಸೆಪಟ್ಟು ಪ್ರಯತ್ನಿಸಿ ಖೆಡ್ಡಾಕ್ಕೆ ಬೀಳುತ್ತಿವೆ.

ಸುಮಾರು ೧೫ ದಿನದ ಹಿಂದೆ ಒಂದು ಕಾರು, ಮರುದಿನ ಒಂದು ಮೆಟಡೋರ್ ಈ ಖೆಡ್ಡಾಕ್ಕೆ ಬಿದ್ದಿದ್ದವು. ಇದುವರೆಗೂ ಯಾರಿಗೂ ಪ್ರಾಣಾಪಾಯವಾಗಿಲ್ಲ.

ಹೊಸ ರಸ್ತೆಗೆ ಟಾರ್ ಹಾಕಿಸುವುದೂ, ಹಳೆ ರಸ್ತೆಯಲ್ಲಿ ಅಡ್ಡ ಗೋಡೆ ಕಟ್ಟುವುದೂ ತುರ್ತಾಗಿ—ಯಾರಿಗಾದರೂ ಪ್ರಾಣಾಪಾಯವಾಗುವುದಕ್ಕೆ ಮೊದಲು—ಆಗಬೇಕಿದೆ.

### ನ. ರಾ. ಪುರ ಜೈಲಿನಿಂದ

## ಇನ್ನೊಬ್ಬ ಕೈದಿ ಪರಾರಿ

ನ. ರಾ. ಪುರ: ಇಲ್ಲಿನ ಉಪ ಬಂದಿಖಾನೆಯಿಂದ ವಿಚಾರಣಾಧೀನ ಕೈದಿ ನೋರಿಸ್ ಎಂಬಾತ ಆ. ೧೩ ರಂದು ಪರಾರಿಯಾಗಿದ್ದಾನೆ. ಕೇರಳದವನೆನ್ನಲಾಗಿರುವ ಆತನನ್ನು ಬೀಟೆ ಮರ ಕದ್ದ ಆರೋಪದ ಮೇಲೆ ಬಂಧಿಸಲಾಗಿತ್ತು.

ಬೆಳಗ್ಗೆ ಮುಖ ತೊಳೆಯಲು ಇನ್ನೊಬ್ಬ ಕೈದಿಯೊಂದಿಗೆ ಹೋದ ಆತ ಅಲ್ಲಿಂದಲೇ ಪರಾರಿಯಾದನೆಂದು ತಿಳಿದುಬಂದಿದೆ. ಆತನಿಗಾಗಿ ಹುಡುಕಾಟ ನಡೆಯುತ್ತಿದೆ.

ಕಳೆದ ವರ್ಷದ ಅಕ್ಟೋಬರ್ ೨೮ರ ರಾತ್ರಿ ಇದೇ ಜೈಲಿನಿಂದ ಪರಾರಿಯಾದ ಐದು ಜನ ಬಂದಿಗಳು ಇನ್ನೂ (ಕಡೆಗೂ) ಪತ್ತೆಯಾಗದಿರುವುದನ್ನು ಇಲ್ಲಿ ಸ್ಮರಿಸಬಹುದು.

## ಕುದುರೆ ಗುಂಡಿಯಲ್ಲಿ ಉಚಿತ ಆರೋಗ್ಯ ಪರೀಕ್ಷೆ

ಕುದುರೆಗುಂಡಿ: ತಲಮಕ್ಕಿ ಗ್ರಾಮವನ್ನು ಈ ವರ್ಷ ದತ್ತು ತೆಗೆದುಕೊಂಡಿರುವ ಕೊಪ್ಪದ ಲಯನ್ಸ್ ಕ್ಲಬ್‌ನ ವತಿಯಿಂದ ಆ. ೨೧ ರಂದು ಸಾರ್ವಜನಿಕರಿಗಾಗಿ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಶಿಬಿರ ಏರ್ಪಡಿಸಲಾಗಿತ್ತು.

ಡಾ|| ಮೋಹನ್ ಬಿ. ಎಸ್. ಶೆಟ್ಟಿ, ಡಾ|| ಎಸ್. ಎಂ. ಶಾನಭಾಗ್, ಡಾ|| ಹೇಮಂತ್ ಕುಮಾರ್ ಶಿಬಿರ ನಡೆಸಿಕೊಟ್ಟರು. ಇನ್ನೂರಕ್ಕೂ ಹೆಚ್ಚು ಜನ ಶಿಬಿರದ ಉಪಯೋಗ ಪಡೆದರು. ಔಷಧಿಗಳನ್ನೂ ಉಚಿತವಾಗಿ ಹಂಚಲಾಯಿತು.

#### ಶಾಲಾ ಮಕ್ಕಳಿಗೆ ಸ್ಲೇಟು, ಪುಸ್ತಕ

ಲಯನ್ಸ್ ಕ್ಲಬ್‌ನವರು ಸ್ವಾತಂತ್ರ್ಯ ದಿನದಂದು ಇಲ್ಲಿನ ಹಿ. ಪ್ರಾ|| ಶಾಲೆಯ ಬಡ ಮಕ್ಕಳಿಗೆ ೫೦ ಜೊತೆ ಸ್ಲೇಟು-ಪುಸ್ತಕಗಳನ್ನು ಹಂಚಿದರು.

## ಎಪಿಎಂಸಿ ಅಧ್ಯಕ್ಷರಾಗಿ ವೀರಪ್ಪಗೌಡ

### ತಾಲ್ಲೂಕಿಗೊಂದು ರೈತ ಭವನ ಕಟ್ಟುವ ಅಪೇಕ್ಷೆ

ಶೃಂಗೇರಿ: ಶಿವಮೊಗ್ಗದ ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಸಮಿತಿಗೆ ಅಧ್ಯಕ್ಷರಾಗಿ ಶೃಂಗೇರಿ ಕ್ಷೇತ್ರದ ಮಾಜಿ ಶಾಸಕ ಕೆ. ಎನ್. ವೀರಪ್ಪಗೌಡ ಆಯ್ಕೆಯಾಗಿದ್ದಾರೆ. ವೀರಾನಾಯ್ಕ ಉಪಾಧ್ಯಕ್ಷರು.

#### ರೈತ ಭವನ

ಈ ಕ್ಷೇತ್ರಕ್ಕೆ ಸಂಬಂಧಪಟ್ಟ ಎಲ್ಲಾ ತಾಲ್ಲೂಕುಗಳಲ್ಲಿ ಒಂದೊಂದು ರೈತ ಭವನ ಕಟ್ಟಿಸಿ ರೈತರಿಗೆ ಆವಶ್ಯಕ ಸೌಲಭ್ಯ ಒದಗಿಸುವುದು; ಪ್ರತಿ ಕೇಂದ್ರದಲ್ಲಿಯೂ ರೈತರ ಸಭೆ ಕರೆದು ವ್ಯ. ಮಾ. ಸಮಿತಿಯ ಉದ್ದೇಶ, ಕಾರ್ಯವ್ಯಾಪ್ತಿ, ರೈತರು ಇದರಲ್ಲಿ ಸಹಕರಿಸ ಬೇಕಾದ ವಿಧಾನ, ರೈತರಿಗಿರುವ ಉಪಯೋಗ—ಇವುಗಳ ಬಗೆಗೆ ಮಾಹಿತಿ ನೀಡುವುದು; ದಿಢೀರ್ ತಪಾಸಣೆಗಳನ್ನು ನಡೆಸಿ, ವಿವಿಧ ಕೇಂದ್ರಗಳಲ್ಲಿ ರೈತರಿಂದ ಸಂಗ್ರಹಿಸಲಾಗುವ [illegible] ತೂಕದ ಬಗ್ಗೆ ನಿಗಾ ಇಟ್ಟು ರೈತರಿಗೆ ಅನ್ಯಾಯ ತಪ್ಪಿಸುವುದು; ಅಕ್ರಮ ವ್ಯವಹಾರಗಳಲ್ಲಿ ಪಾಲ್ಗೊಳ್ಳುವ ಅಧಿಕಾರಿಗಳ ಬಗ್ಗೆ ತೀವ್ರ ಕ್ರಮ ಕೈಗೊಳ್ಳುವುದು—ಇವು ತಮ್ಮ ಅಧಿಕಾರಾವಧಿಯಲ್ಲಿ ತಾವು ಹಮ್ಮಿಕೊಂಡಿರುವ ಕೆಲವು ಗುರಿಗಳು ಎಂದು ವೀರಪ್ಪಗೌಡ ತಿಳಿಸಿದ್ದಾರೆ. ('ಶೃಂಗೇರಿ'ಯಿಂದ.)

## ನಿರೀಕ್ಷೆ

ಕೊಪ್ಪ ತಾ|| ರೈತಸಂಘ ಜಪ್ತಿ ವಿರೋಧಿ ಮತ್ತು ಲಂಚ ವಿರೋಧಿ ದಳಗಳನ್ನೂ, ಆಡಳಿತ ವೀಕ್ಷಣಾ ಸಮಿತಿಯನ್ನೂ ರಚಿಸಿ, ತಾ||ನ ಆಡಳಿತದಲ್ಲಿ ಸ್ವಚ್ಛತೆ, ಚುರುಕುತನಗಳನ್ನು ತರಲು ಹಾಗೂ ರೈತರಿಗೂ ಜನಸಾಮಾನ್ಯರಿಗೂ ರಕ್ಷಣೆ ಒದಗಿಸಲು ಒಂದು ಪುಟ್ಟ ಹೆಜ್ಜೆ ಇಟ್ಟಿದೆ.

ಇವತ್ತು ನಮಗುಳಿದಿರುವ ಒಂದೇ ಒಂದು ಆಸೆಯೆಂದರೆ ಇಂದಲ್ಲ ನಾಳೆ, ಜನರ ಕಷ್ಟ ಸುಖಗಳ ಮಧ್ಯದಿಂದಲೇ ಬಂದ ಸ್ಥಳೀಯ ಕಾರ್ಯಕರ್ತರಿಂದ ಕೂಡಿದ ಇಂಥ ಸಮಿತಿಗಳೇ ಜನರಿಗೆ ತಮ್ಮ ಬದುಕುವ ದಾರಿ ಉಳಿಸಿಕೊಳ್ಳಲು ನಾಯಕತ್ವ, ಮಾರ್ಗದರ್ಶನ ಕೊಡುತ್ತವೆ—ಎಂಬುದು. ಇಂಥ ಪರಿಸ್ಥಿತಿಯಲ್ಲಿ, ರೈತಸಂಘದ ಈ ಪುಟ್ಟ ಹೆಜ್ಜೆಯ ದಿಕ್ಕನ್ನು ಅರ್ಥ ಮಾಡಿಕೊಂಡು ತಾವು ಸ್ವಲ್ಪವಾದರೂ ಮನುಷ್ಯರಾಗಲು ಗಿಂಬಳದ ಮೈಗಳ್ಳ ಜನ ಇಂಥ ಒಂದೊಂದು ಪುಟ್ಟ ಹೆಜ್ಜೆಯನ್ನಾದರೂ ಇಡುತ್ತಾರೆಯೇ–ಎಂಬುದು ಎಲ್ಲಾ ಆಶಾವಾದಿಗಳ ಆಸೆ, ನಿರೀಕ್ಷೆ.

ಹಾಗೆಯೇ, ಈ ಸಮಿತಿಗಳಲ್ಲಿ ಸೇರಿರುವ ರೈತ ಕಾರ್ಯಕರ್ತರುಗಳಲ್ಲೂ ಎಲ್ಲರೂ ಹುಳುಕಿಲ್ಲದವರು ಎನ್ನಲು ಬರುವುದಿಲ್ಲ. ತಾವಿರುವ ಸಂಘಟನೆಯನ್ನು, ತಮ್ಮ ಸ್ಥಾನವನ್ನು ತಮ್ಮ ವೈಯಕ್ತಿಕ ಮೈಗಳ್ಳ ಜೀವನದ ಪೋಷಣೆಗೆ ಬಳಸಿಕೊಳ್ಳುವವರು ಅಥವಾ ಇನ್ನಾವುದೇ ರೀತಿಯಲ್ಲಿ ಸಂಘಟನೆಯ ಹಿತಕ್ಕೆ ಧಕ್ಕೆಯಾಗುವಂತೆ ವರ್ತಿಸುವವರು ಇಲ್ಲ ಅಂತ ಏನಿಲ್ಲ. ಏಕೆಂದರೆ, ಇಷ್ಟು ಉಪಯುಕ್ತವಾದ, ಗೌರವಯುತವಾದ ಸಂಘಟನೆಯಲ್ಲೂ, ಅದರಲ್ಲಿನ ಕೆಲವು ಹುಳುಕರ ವರ್ತನೆ–ಚಟುವಟಿಕೆಗಳು ಅಲ್ಲಿನ ಪ್ರಜ್ಞಾವಂತ, ಪ್ರಾಮಾಣಿಕ ಕಾರ್ಯಕರ್ತರಿಗೆ ತಲೆ ತಗ್ಗಿಸುವಂತೆ ಮಾಡುತ್ತಿರುವುದು ನಮ್ಮ ಕಣ್ಣು ಮುಂದೇ ಇವೆ. ಇಂಥ ಪ್ರಜ್ಞಾವಂತರು ಈ ಹುಳುಕುಗಳಿಗಾಗಿ ಸದಾ ಕಣ್ಣು ತೆರೆದಿಟ್ಟುಕೊಂಡಿದ್ದು, ಅದನ್ನೆಲ್ಲ ಆಗಾಗ್ಗೆ ಕೇರಿ ತೂರುತ್ತ ಮುಂದಕ್ಕೆ ಹೋದರೆ ಮಾತ್ರ ಸಾರ್ಥಕವಾಗುತ್ತದೆ. ಹುಳುಕನ್ನು ಬಹಿರಂಗಗೊಳ್ಳಲು ಬಿಡದೆ ಮುಚ್ಚಿಡುವ ಪ್ರಯತ್ನ ಮಾಡಿದರೆ ಸಂಘಟನೆ ಮುರುಟೀತು.

ಅವರು ತಮ್ಮ ತಿಳುವಳಿಕೆಯನ್ನು ವಿಸ್ತರಿಸಿಕೊಳ್ಳುತ್ತ, ತಮ್ಮಂಥವರೇ ಇನ್ನೂ ಹತ್ತಾರು ಜನರನ್ನು ಹುಡುಕಿ ಮುಂದ(ತಮಗಿಂತಲೂ ಮುಂದಾದರೂ ಸರಿ)ತರುತ್ತ, ಜನರನ್ನು ಸಂಘಟನೆಗೆ ಹಾಗೂ ತಮ್ಮ ಹಕ್ಕುಗಳಿಗಾಗಿ ಕಾಲು ನೆಕ್ಕುವುದರ ಬದಲು ಹೋರಾಟಕ್ಕೆ ತಯಾರು ಮಾಡಬೇಕಾಗುತ್ತದೆ. ಜನ ಅರ್ಜಿ ತಂದು ಮಂತ್ರಿಗಳ ಕೈಲಿ ಕೊಟ್ಟು ಕಾಯುತ್ತ ಕೂರುವಂತೆ ತಮ್ಮ ಸಮಸ್ಯೆಯನ್ನು ತಂದು ಈ ಕಾರ್ಯಕರ್ತರ ಕೈಲಿ ಹೇಳಿ ಸುಮ್ಮನಾಗುವ ಬದಲು ತಕ್ಕ ಮಾರ್ಗೋಪಾಯವನ್ನು ಸಹ ಹುಡುಕುವಂತಹ ಹಾಗೂ ಅದನ್ನು ತಾವೇ ಹತ್ತಾರು ಜನ ಕೂಡಿ ಈಡೇರಿಸುವಂತಹ ಪ್ರಜ್ಞೆ ಈ ಕಾರ್ಯಕರ್ತರ ಕೆಲಸದಿಂದ ಜನರಲ್ಲಿ ಮೂಡತೊಡಗಿದರೆ, ಕಳಂಕರಹಿತವಾದ ಬಲಿಷ್ಠ ರೈತ ಸಂಘಟನೆ ಸಾಧಿಸಲಾರದ್ದು ಏನೂ ಇಲ್ಲ.

**—ಸಂಪಾದಕ.**

## "ಗುಡಿಬಂಡೆ ಚಿಕಿತ್ಸೆ"

**ಕೋಲಾರ ಜಿಲ್ಲೆಯ ಗುಡಿಬಂಡೆಯ ಹಳ್ಳಿಗರು ಲಂಚದ ವಿರುದ್ಧ ಕಂಡು ಹಿಡಿದ ಈ ಅಪೂರ್ವ ಚಿಕಿತ್ಸೆ ನಮ್ಮಲ್ಲೂ ನಿಮ್ಮಲ್ಲೂ ಉಪಯೋಗಕ್ಕೆ ಬರುವಂಥದು**

ಎರಡು ವಿಕ್ರಯ ದಸ್ತಾವೇಜುಗಳನ್ನು ರೆಜಿಸ್ಟರ್ ಮಾಡಲು ಲಂಚದ ಪ್ರಮಾಣವು ಎಷ್ಟಿರಬೇಕೆಂದು ಚೌಕಾಸಿ ಮಾಡುವಾಗ ಗುಡಿಬಂಡೆಯ ಸಬ್ ರೆಜಿಸ್ಟ್ರಾರ್‌ರ ಕಛೇರಿಯ ಸಿಬ್ಬಂದಿಯವರು ಅತಿ ದುರಾಶೆಯಿಂದಲೂ ಛಲದಿಂದಲೂ ದರ್ಪದಿಂದಲೂ ನಡಕೊಂಡುದರಿಂದ ಕೆಲವು ಹಳ್ಳಿಗರು ರೋಸಿ ಹೋಗಿ ಅವರಿಗೆ ತಕ್ಕ ಶಾಸ್ತಿಯನ್ನೇ ಮಾಡಿದುದು ವರದಿಯಾಗಿದೆ.

ಈ ಘಟನೆಯಾದುದು ಜೂನ್ ೨೮ ರಂದು. ಕೊಂಡವನಬನಹಳ್ಳಿಯ ನಾರಾಯಣಸ್ವಾಮಿಯವರು ಭೂ ಅಭಿವೃದ್ಧಿ ಬ್ಯಾಂಕಿನಿಂದ ೨೦,೦೦೦ ರೂಪಾಯಿಯ ಸಾಲವನ್ನು ಪಡೆದಿದ್ದರು. ಈ ಸಾಲದ ಬಗ್ಗೆ ಅವರು ತೆರಬೇಕಾಗಿದ್ದ ಬಡ್ಡಿಯ ಒಂದಂಶವು ಮನ್ನಾ ಆಗುವಂತೆ ಅವರು ಜೂನ್ ೩೦ರ ಒಳಗೆ ಸಾಲವನ್ನು ತೀರಿಸುವುದು ಅವಶ್ಯವಾಗಿತ್ತು. ಆದುದರಿಂದ ಅವರು ತನ್ನ ಎರಡು ತುಂಡು ನೆಲಗಳನ್ನು ನರಸರೆಡ್ಡಿ ಮತ್ತು ಅಶ್ವಥಪ್ಪ ಎಂಬಿಬ್ಬರಿಗೆ ಮಾರಲು ಒಪ್ಪಿದರು. ವಿಕ್ರಯ ದಸ್ತಾವೇಜುಗಳನ್ನು ರೂ. ೨,೮೦೦ ರಷ್ಟು ಮೌಲ್ಯದ ಠಸ್ಸೆ ಕಾಗದದಲ್ಲಿ ಕ್ರಮಬದ್ಧವಾಗಿ ಮಾಡಿಸಿ ಅವುಗಳನ್ನು ರೆಜಿಸ್ಟರ್ ಮಾಡಲೆಂದು ಗುಡಿಬಂಡೆಯ ಸಬ್‌ರೆಜಿಸ್ಟ್ರಾರ್‌ರ ಕಛೇರಿಗೆ ಮಾರುವವರೂ ಕೊಂಡುಕೊಳ್ಳುವವರೂ ಹೋದರು. ಕಛೇರಿಯ ಗುಮಾಸ್ತರೊಬ್ಬರು ಮತ್ತು ಜವಾನನೊಬ್ಬ ೨,೮೦೦ ರೂ. ಗಳ ಲಂಚವನ್ನು ಕೇಳಿದರು. ಅಷ್ಟು ದೊಡ್ಡ ಪ್ರಮಾಣದ ಲಂಚವನ್ನು ತಾನು ಕೊಡಲಾರೆನೆಂದು ನಾರಾಯಣಸ್ವಾಮಿಯವರು ದೈನ್ಯದಿಂದ ನಿವೇದಿಸಿಗೊಂಡುದರಿಂದ ಆ ಕಛೇರಿಯ ಸಿಬ್ಬಂದಿಯವರು ತಮ್ಮ ಕೇಳಿಕೆಯನ್ನು ೨,೮೦೦ ರಿಂದ ೨,೧೦೦ಕ್ಕೆ ಇಳಿಸಿದರು. ನಾರಾಯಣಸ್ವಾಮಿಯವರು ರೂ. ೩೦೦ ಕೊಡುವೆನೆಂದು ಮೊದಲಿಗೆ ಹೇಳಿದವರು ಆಮೇಲೆ ಅನುಕ್ರಮವಾಗಿ ಈ ಸಂಖ್ಯೆಯನ್ನು ೫೦೦ ಕ್ಕೂ ೭೦೦ ಕ್ಕೂ ಏರಿಸಿದರು. ಆದರೆ ಛಲದಂಕಮಲ್ಲನಾಗಿದ್ದ ಆ ಕಛೇರಿಯ ಜವಾನನು ಅವರು ನೀಡಿದ್ದ ವಿಕ್ರಯ ದಸ್ತಾವೇಜುಗಳನ್ನೇ ಅವರ ಮುಖಕ್ಕೆ ಎಸೆದು "ಇಲ್ಲಿಂದ ತೊಲಗಿ" ಎಂದು ಘರ್ಜಿಸಿದನು.

ಅಲ್ಲಿಯೇ ಇದ್ದ ಇನ್ನೊಂದು ಹಳ್ಳಿಯ ಕೆಲವು ಹಳ್ಳಿಗರು ಮತ್ತು ಆ ಹಳ್ಳಿಯ ಪಂಚಾಯತ್ತಿನ ಅಧ್ಯಕ್ಷರು ಜವಾನನ ದೌರ್ಜನ್ಯದಿಂದ ಬಹಳಷ್ಟು ಕೆರಳಿದರು. ಅವರು ಮಾಡಿದ ಗಲಾಟೆಯಿಂದ ಮತ್ತಷ್ಟು ಜನರು ಅಲ್ಲಿಗೆ ಆಕರ್ಷಿತರಾದರು. ಸ್ಥಳೀಯ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರೂ ಅಲ್ಲಿಗೆ ಆಗಮಿಸಿದರು. ಅಲ್ಲಿ ನೆರೆದ ಸಮಸ್ತರೂ ನಾರಾಯಣಸ್ವಾಮಿಯವರ ವಿಕ್ರಯ ದಸ್ತಾವೇಜುಗಳನ್ನು ಆ ಕಛೇರಿಯವರು ರೆಜಿಸ್ಟರ್ ಮಾಡಿಸಲೇಬೇಕೆಂದು ಛಲತೊಟ್ಟರು. ಆಗ ಆ ಕಛೇರಿಯ ಗುಮಾಸ್ತರು ಕಛೇರಿಯನ್ನು ಮುಚ್ಚಿ ಹೊರಗೆ ಹೋಗುವ ಪ್ರಯತ್ನವನ್ನು ಮಾಡಿದರೂ ಅಲ್ಲಿದ್ದ ಹತ್ತುಮಂದಿ ಸಮಸ್ತರು ಜನರ ಪ್ರಯತ್ನವನ್ನು ವಿಫಲಗೊಳಿಸಿದರು. ಕಟ್ಟಕಡೆಗೆ ಆ ಗುಮಾಸ್ತರು ನಾರಾಯಣಸ್ವಾಮಿಯವರ ದಸ್ತಾವೇಜುಗಳನ್ನು ರೆಜಿಸ್ಟರ್ ಮಾಡಲು ಒಪ್ಪಿದರು.

ಅಂತೆಯೇ ಅವುಗಳನ್ನವರು ರೆಜಿಸ್ಟರ್ ಮಾಡಿಯಾದ ಮೇಲೆ ಆ ಕಛೇರಿಯ ಜವಾನನು, ನಾರಾಯಣಸ್ವಾಮಿಯವರು ಒಮ್ಮೆ

(೩ನೇ ಪುಟಕ್ಕೆ)

## ನಾವೂ ಸ್ವಾತಂತ್ರ್ಯದ ಹಬ್ಬ ಆಚರಿಸುತ್ತೇವೆ !

ನಾವು ಆಚರಿಸುವ ಹಲವು ರಾಷ್ಟ್ರೀಯ ಮತ್ತು ನಾಡಹಬ್ಬಗಳು ಜನಸಾಮಾನ್ಯರ ಪಾಲಿಗೆ ಎಷ್ಟು ಅರ್ಥ ಉಳಿಸಿಕೊಂಡಿವೆ? ಜನಸಾಮಾನ್ಯರು ತಮ್ಮ ನಿತ್ಯ ಜೀವನದ ಜಂಜಾಟದಿಂದಲೋ, ಹೊಟ್ಟೆ ತುಂಬಿರುವ ಆಲಸ್ಯದಿಂದಲೋ, ತಮ್ಮ ತಕ್ಷಣದ ಸ್ವಾರ್ಥದ ಹೊರತು ಉಳಿದೆಲ್ಲದರ ಬಗೆಗಿನ ತಾತ್ಸಾರ ಮತ್ತು ಬೇಜವಾಬ್ದಾರಿತನದಿಂದಲೋ – ಆ ಹಬ್ಬಗಳಲ್ಲಿ ಎಷ್ಟು ಆಸಕ್ತಿ ಹೊಂದಿದ್ದಾರೆ? ಅವು ಅಧಿಕಾರಿಗಳ ಪಾಲಿಗೆ 'ಕರ್ತವ್ಯ'ವಾಗಿಯೂ, ಊರಿನ 'ಪ್ರತಿಷ್ಠಿತರ' ಪಾಲಿಗೆ ತಮ್ಮ ಪ್ರತಿಷ್ಠೆ ಉಳಿಸಿಕೊಳ್ಳಲು ಅಥವಾ ತೋರಿಸಿಕೊಳ್ಳಲು ಅನಿವಾರ್ಯವಾದ ಸಂದರ್ಭಗಳಾಗಿಯೂ ಉಳಿದಿವೆ, ಅಷ್ಟೇಯೆ? ಎಂಬ ಪ್ರಶ್ನೆಗಳು ಈ ಸಲದ ಸ್ವಾತಂತ್ರ್ಯ ದಿನದಂದು ಪುನಃ ಮೂಡಿದವು

ಇದಕ್ಕೆ ಕಾರಣವಾದ ಹಲವು ಘಟನೆಗಳು:

§ ಶಾಲೆಗಡಿಯ ಸಮಾರಂಭದಲ್ಲಿ ಸುಮಾರು ಒಂದೂವರೆ ಸಾವಿರ ಮಕ್ಕಳು ಭಾಗವಹಿಸಿದ್ದಿರಬಹುದು. ಅಧಿಕಾರಿ ವರ್ಗದ ಸುಮಾರು ೭೫ ಜನ, ಪ್ರತಿಷ್ಠಿತರು ಒಂದು ೨೦ ಜನ, ಅಧ್ಯಾಪಕ ವರ್ಗದ ಒಂದು ೩೦ ಜನ ಬಿಟ್ಟರೆ ಸಾಮಾನ್ಯ ನಾಗರಿಕರು ಒಂದು ೨೫–೩೦ಕ್ಕಿಂತ ಹೆಚ್ಚಿರಲಿಲ್ಲ.

§ ಕೊಪ್ಪ ಪಂಚಾಯ್ತಿ ಕಟ್ಟಡದ ಮೇಲೆ ಹಾರುತ್ತಿದ್ದ ರಾಷ್ಟ್ರಧ್ವಜದಲ್ಲಿ ಕೇಸರಿ, ಬಿಳಿಯ ಜೊತೆ ನೀಲಿ ಬಣ್ಣ. ಅದು ಹಸುರಿನ ಯಾವ ಛಾಯೆಯೂ ಆಗಿರಲಿಲ್ಲ. ಅಪ್ಪಟ ನೀಲಿ.

§ ಕಾಫಿ ಬೋರ್ಡ್‌ನಲ್ಲಿ ಗೇಟಿಗೆ ಒಂದು ಸಣ್ಣ ಕೋಲು ಕಟ್ಟಿ ಧ್ವಜವನ್ನು ಅದಕ್ಕೆ ಸಿಕ್ಕಿಸಿದ್ದರು. ಉದ್ದವಾದ ಕೋಲು ಸಿಗಲಿಲ್ಲವಂತೆ. ಹಾಗೆ ನೇತುಹಾಕುವುದು ಕಾನೂನು ಪ್ರಕಾರ ಸರಿಯೋ ತಪ್ಪೋ, ಅಂತೂ ಬಾವುಟದ ಆ ಅವಸ್ಥೆ ನೋಡಲು ಬಹಳ ದುಃಖವಾಗುತ್ತಿತ್ತು.

## ಆಗಸ್ಟ್ ೧೫ ಕರಾಳ ದಿನಾಚರಣೆ

**(ಆಗಸ್ಟ್ ೧೫ರ ದಿನವನ್ನು ಕರಾಳದಿನವಾಗಿ ಆಚರಿಸಿದ ದಲಿತ ಸಂಘರ್ಷ ಸಮಿತಿ ಹೊರಡಿಸಿದ ಕರಪತ್ರ.)**

ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳ ಬಗ್ಗೆ ಅಧಿಕಾರ ಹಿಡಿದ ಜನ ಪೊಳ್ಳು ಮಾತುಗಳನ್ನಾಡುತ್ತಿದ್ದಾರೆ. ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಕೋಮು–ಜಾತಿ ಗಲಭೆ, ಬೆಲೆ ಏರಿಕೆಗಳಿಂದ ಜನಸಾಮಾನ್ಯರು ನರಳುತ್ತಿದ್ದಾರೆ.

ಜಾತಿವಾದ, ಕೋಮುವಾದ ಜನತೆಯನ್ನು ಒಡೆದುಹಾಕಿ ಅಸಮಾನತೆಯನ್ನು ಸೃಷ್ಟಿಸಿವೆ. ಸ್ವಾತಂತ್ರ್ಯ ಬಂದ ನಂತರವೇ ೪೦ ಸಾವಿರಕ್ಕೂ ಹೆಚ್ಚು ದಲಿತರ ಕೊಲೆಗಳಾಗಿವೆ. ಲೆಕ್ಕವಿಲ್ಲದಷ್ಟು ದಲಿತ ಮಹಿಳೆಯರ ಮಾನಭಂಗಗಳು, ಸಾಮೂಹಿಕ ನರಹತ್ಯೆಗಳು ದಿನನಿತ್ಯ ನಡೆಯುತ್ತಿವೆ.

ಪ್ರತಿಭಟನೆಯ ಸೊಲ್ಲೆತ್ತಿದವರನ್ನು ಪೋಲೀಸರು ಅಮಾನುಷವಾಗಿ ಬಗ್ಗು ಬಡಿಯುತ್ತಿದ್ದಾರೆ, ಜನಸಾಮಾನ್ಯರ ಮಾನವೀಯ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ.

ಈ ಆಗಸ್ಟ್ ೧೫ರ ಹೊತ್ತಿಗೆ ರಾಜ್ಯದಲ್ಲಿ ಆಳುವಪಕ್ಷ ಬದಲಾಗಿದೆ. ಆಯ್ಕೆಯಾದ ಹೊಸ ಸರ್ಕಾರದಿಂದ ಬದಲಾವಣೆಯನ್ನು ನಿರೀಕ್ಷಿಸಿದ್ದ ಜನತೆ ಭ್ರಮ ನಿರಸನಗೊಂಡಿದೆ. ಹೊಸ ಸರ್ಕಾರ ಬಂದಂದಿನಿಂದಲೂ ದಲಿತರ ಮೇಲಿನ ಕೊಲೆ ಸುಲಿಗೆಗಳು ಹೆಚ್ಚುತ್ತಿವೆ. "ಗ್ರಾಮಗಳಿಗೆ ಹೆಚ್ಚಿನ ಅಧಿಕಾರ" ಎಂಬ ಆಕರ್ಷಕ ಘೋಷಣೆಯನ್ನು ಮುಂದೆ ಮಾಡಿ ತರುತ್ತಿರುವ ಕಾನೂನು ದಲಿತರ ಕಣ್ಣೀರನ್ನು ತೊಡೆಯಲಾರದು.

ಈ ದೇಶದ ದುಡಿಯುವ ಜನತೆಯ ಮೇಲೆ ನಿರಂತರವಾಗಿ ನಡೆಯುತ್ತಿರುವ ಅನ್ಯಾಯ ಅಕ್ರಮಗಳನ್ನು ಉಗ್ರವಾಗಿ ಖಂಡಿಸುತ್ತ ನೊಂದವರಿವೆಯಲ್ಲಿ ಜಾಗೃತಿಯನ್ನು ಉಂಟುಮಾಡಲು ಆಗಸ್ಟ್ ೧೫ ರ ಸ್ವಾತಂತ್ರ್ಯ ದಿನವನ್ನು ಕರಾಳದಿನವನ್ನಾಗಿ ಆಚರಿಸುವುದರ ಮೂಲಕ ಹೊಸ ಸಮಾಜ ನಿರ್ಮಾಣಕ್ಕೆ ಪಣ ತೊಡೋಣ, ಬನ್ನಿ.

### ಓದುಗರಲ್ಲಿ

ತಮ್ಮ ಊರಿನ ಸುದ್ದಿ ಪತ್ರಿಕೆಯಲ್ಲಿ ಬರಬೇಕೆಂದು ಯಾರಿಗೆ ಆಶೆ ಇರುವುದಿಲ್ಲ? ಅದರಂತೆ, ನಿಮ್ಮೂರಿನಲ್ಲಿ ನಡೆಯುವ ಸಮಾರಂಭಗಳಿಗೆಲ್ಲ ನಮಗೆ ಆಹ್ವಾನ ಕಳಿಸುತ್ತೀರಿ. ಆದರೆ ನಮಗೆ ಎಲ್ಲ ಸಮಾರಂಭಗಳಲ್ಲಿ ಭಾಗವಹಿಸಲು ಆಗುವುದಿಲ್ಲ. ಹಾಗೆಂದು, ಕರೆಯೋಲೆ ನೋಡಿ ಇಂಥ ಊರಿನಲ್ಲಿ ಇಂಥ ಸಮಾರಂಭ ನಡೆಯಿತು ..... ಅಂತ ಸುದ್ದಿ ಬರೆಯಲೂ ಆಗುವುದಿಲ್ಲ— ಕರೆಯೋಲೆಯಲ್ಲಿ ಹೆಸರಿಸಿದವರೆಲ್ಲ ಕೆಲವೊಮ್ಮೆ ಭಾಗವಹಿಸಿರುವುದಿಲ್ಲ.

ಆದ್ದರಿಂದ, ಸಮಾರಂಭ ನಡೆದ ಕೂಡಲೇ ಅದರ ಒಂದು ಸಣ್ಣ ವರದಿಯನ್ನು ಪತ್ರಿಕೆಗೆ ಕಳಿಸಲು ವ್ಯವಸ್ಥೆ ಮಾಡಿ. ಮುಖ್ಯ ವಿಷಯವನ್ನಷ್ಟೇ ಬರೆದರೆ ಸಾಕು. ಎಲ್ಲರೂ ಮಾಡಿದ ಭಾಷಣಗಳನ್ನೆಲ್ಲ ಬರೆಯಬೇಕಾಗಿಲ್ಲ. **—ಸಂಪಾದಕ.**

## ಓದುಗರ ಪತ್ರಗಳು

# ಬೇಗಾನೆಗೆ ಹೆಸರು— ಮೊಸರು ನಡುಮಾರ್ಗದಲ್ಲಿಯೇ ಅಪಹರಣ

ಸಂಪಾದಕರಲ್ಲಿ,

ತೊರೆಹಡ್ಲು ಸರ್ಕಾರಿ ಪ್ರೌಢಶಾಲೆಯ ಬಗ್ಗೆ ಅನಾಮಧೇಯರಿಂದ ಬರುತ್ತಿರುವ ಆಪಾದನೆಗಳ ಬಗ್ಗೆ ಸ್ಪಷ್ಟೀಕರಣ:

೧. ಕಾವಡಿಯಲ್ಲಿರಬೇಕಾದ ಕಾವಡಿ ಗ್ರಾಮ ಪಂಚಾಯ್ತಿಯ ಕಟ್ಟಡ ಹಾಗೂ ಕಾವಡಿ ಸೇವಾ ಸಹಕಾರ ಸಂಘದ ಕಟ್ಟಡಗಳು ಅಡ್ಡಗದ್ದೆಯಲ್ಲಿರುವಂತೆ ತೊರೆಹಡ್ಲು ಹೈಸ್ಕೂಲು ಕಟ್ಟಡ ಅಡ್ಡಗದ್ದೆ ಅಥವಾ ಕಾವಡಿಯಲ್ಲ, **ತೊರೆಹಡ್ಲು ಗುಡ್ಡದಲ್ಲಿಯೇ** ಕಾವಡಿ– ಶಾನುವಳ್ಳಿ ಸರ್ಕಾರಿ ರಸ್ತೆಗೆ ಸಮೀಪವಾಗಿದೆ. ಇದು ಸಹ, ಈ ರಸ್ತೆಯ ಮೂಲಕ ಬಸ್ಸಿನ ವ್ಯವಸ್ಥೆಯಾದಾಗ, ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಮಾಡಿದ್ದಾಗಿರುತ್ತೆ.

೨. ಹೈಸ್ಕೂಲು ಮಂಜೂರಾತಿ ಸಮಯದಲ್ಲಿ ಮುಖ್ಯ ಪೋಷಕ ಶಾಲೆಗಳಾಗಿ ಪರಿಗಣಿಸಲ್ಪಟ್ಟವು ಅಡ್ಡಗದ್ದೆ, ಕೆಳಕೊಪ್ಪ, ಧರೆಕೊಪ್ಪ, ಬಿಲಗದ್ದೆ, ಮೇಲುಬೆಳರೆ, ಉಳುವೆಬೈಲು ಈ ರೀತಿ ಇದ್ದು, ಅಡ್ಡಗದ್ದೆ ಶಾಲೆಯ ವಿನಹ ಉಳಿದೆಲ್ಲ ಶಾಲೆಗಳಿಗೆ ಅಡ್ಡಗದ್ದೆ ತುಂಬಾ ದೂರವಾಗುತ್ತದೆ. ಹಾಲಿ ೧೨೪ ವಿದ್ಯಾರ್ಥಿಗಳನ್ನು ಹೊಂದಿರುವ ಪ್ರೌಢಶಾಲೆಯ ಎರಡು ತರಗತಿಗಳಲ್ಲಿ ಅಡ್ಡಗದ್ದೆ ೩೭, ಕೆಳಕೊಪ್ಪ ೩೫, ಹೊಸಕೊಪ್ಪ ೮, ಧರೆಕೊಪ್ಪ ೧೦, ಮೇಲುಬೆಳರೆ ೫, ಬಿಲಗದ್ದೆ ೬, ನಿಲುವಾಗಿಲು ೨, ನೆಲ್ಲೂರು ೧, ಶೃಂಗೇರಿ ೨, ಉತ್ತಮೇಶ್ವರ ೩, ಹಾಗೂ ಉಳಿದ ವಿದ್ಯಾರ್ಥಿಗಳು ಬೇರೆ ಬೇರೆ ಹಿರಿಯ ಪ್ರಾಥಮಿಕ ಶಾಲೆಗಳಿಂದ ಬಂದವರಾಗಿರುತ್ತಾರೆ. ಅಲ್ಲದೆ ಮಂಜೂರಾತಿ ಸಮಯದಲ್ಲಿ ಒಂದು ಪ್ರಮುಖ ಅಂಶವಾದ ಅಧಿಕ ಸಂಖ್ಯೆಯ ಹರಿಜನ–ಗಿರಿಜನ ವಾಸವಾಗಿರುವ ಬಿಲಗದ್ದೆ ಗ್ರಾಮಸ್ಥರು ಅಡ್ಡಗದ್ದೆಗೆ ವಿರೋಧವಾಗಿದ್ದರು. ಆದಾಗ್ಯೂ ಈಗಿರುವ ಹೈಸ್ಕೂಲು ಜಾಗ ಬೇಗಾನೆಗಿಂತಲೂ ಅಡ್ಡಗದ್ದೆಗೇ ಸಮೀಪವಾಗಿ ಇದೆ.

೩. ಸ್ಥಳೀಯ ಸಾರ್ವಜನಿಕರಿಂದ ಸರ್ಕಾರಕ್ಕೆ ೨೦,೦೦೦ ರೂ. ವಂತಿಗೆ ಸಂಗ್ರಹಿಸಿ ಕಟ್ಟಬೇಕಿರುವುದರಿಂದ ಸಮಿತಿಯ ಸದಸ್ಯರು ಸಾರ್ವಜನಿಕರಲ್ಲಿ ಹೆಚ್ಚಿನ ಮೊತ್ತದ ವಂತಿಗೆ ಹಣಕ್ಕಾಗಿ ವಿಶ್ವಾಸ ಪೂರ್ವಕ ಒತ್ತಾಯಿಸುವುದು ಅನಿವಾರ್ಯವಾದರೂ ಬಲಾತ್ಕಾರ ಸಾಧ್ಯವೆ? ಈ ಬಗ್ಗೆ ಪ್ರತಿಯೊಬ್ಬರೂ ವಾಗ್ದಾನ ಮಾಡಿದ ಹಣ, ಪಾವ್ತಿ ಮಾಡಿದ ಹಣ, ಬಾಕಿ ಹಣ, ಹಾಗೂ ಒಟ್ಟು ಸಂಗ್ರಹವಾದ ಹಣ ಮತ್ತು ಶಾಲೆಯ ಬಗ್ಗೆ ಖರ್ಚು ಮಾಡಿದ ಹಣದ ವಿವರಗಳನ್ನು ಶೀಘ್ರವಾಗಿ ನೂತನ ಕಟ್ಟಡದ ಅಧಿಕೃತ ಪ್ರಾರಂಭೋತ್ಸವ ಸಮಯದಲ್ಲಿ ಪ್ರಕಟಿಸಲಾಗುವುದು. ಆಗ, ತಮ್ಮ ಪತ್ರಿಕೆಯಲ್ಲಿ ವಂತಿಗೆ ಹಣದ ವಿಚಾರವಾಗಿ ದೂರುತ್ತಿರುವ ಮಿತ್ರ ಅನಾಮಧೇಯ ಶ್ರೀಯುತರು ನೀಡಿರುವ ಕುಂಬಳಕಾಯಿ ವಂತಿಗೆಯ ವಿಚಾರವು ತಮ್ಮ ಗಮನಕ್ಕೆ ಬರುವುದನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವಿರಾಗಿ ಆಶಿಸುತ್ತೇನೆ.

ಕೊನೆಯದಾಗಿ, ಬೇಗಾನೆ ರಾಮಯ್ಯನವರಿಂದ ಬೇಗಾನೆಗೆ ದೊರೆತದ್ದು ಮೊಸರು ಹೌದು. ಆದರೆ ಅದು ಮಾರ್ಗಮಧ್ಯದಲ್ಲಿಯೇ ಅಪಹರಣವಾಗಿ, ಜಗ್ಗಾಟದಲ್ಲಿ ಕೆಸರಾಗಿ ಪರಿಣಮಿಸಿದೆ. ಆದರೂ ಈಗ ಆ ಕೆಸರಿನಲ್ಲಿಯೇ ಸಸಿ ನೆಡಲಾಗಿದೆ, ಉತ್ತಮ ಫಲಕ್ಕೆ ಎಲ್ಲರೂ ಒಂದಾಗಿ ಪ್ರಯತ್ನಿಸೋಣ.

**—ಬೇಗಾನೆ ಕಾಡಪ್ಪ.**
ಕಾರ್ಯದರ್ಶಿ, ಪ್ರೌಢಶಾಲಾ ಸಮಿತಿ,
ತೊರೆಹಡ್ಲು. ಶೃಂಗೇರಿ ತಾಲ್ಲೂಕು.

# ಮುಗಿದು ಹೋದ ಕಥೆ ಇದು

ತೊರೆಹಡ್ಲು ಪ್ರಾೌಢಶಾಲೆಯ ಮಂಜೂರಾತಿ ಬಗ್ಗೆ ನಡೆದ ಕಥೆ ಇದು: ಶಾಲೆ ಬೇಕೆಂದು ಕೇಳಿಕೊಳ್ಳಲು ಪ್ರಯತ್ನಿಸಿದ್ದು ಕೆಳಕೊಪ್ಪ ಶಾಲೆಯ ಅಭಿವೃದ್ಧಿ ಸಮಿತಿಯವರು. ಆಗ ಈ ಬಗ್ಗೆ ಸಮಿತಿಯೊಂದನ್ನು ರಚನೆ ಮಾಡಲಾಯ್ತು. ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡವರು ಶೃಂಗೇರಿ ತಾ॥ ಅ॥ ಮಂಡಳಿಯ ಅಧ್ಯಕ್ಷರು ಮತ್ತು ಈ ಭಾಗದ ಸದಸ್ಯರು. ಹೊಸಕೊಪ್ಪ ಸಮೀಪವಿರುವುದರಿಂದ ಕೊಪ್ಪ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರನ್ನೂ ಈ ಸಭೆಗೆ ಕರೆಯಲಾಯ್ತು. ಅಂತೆಯೇ ನೆರೆಯ ಪಂಚಾಯ್ತಿಗಳಾದ, ಕಾವಡಿ, ಹಾಲಂದೂರು, ಧರೆಕೊಪ್ಪ, ನಿಲುವಾಗಿಲು, ಶಾನುವಳ್ಳಿಗಳ ಪಂಚಾಯ್ತಿ ಛೇರ್ಮೆನ್‌ರವರು ಊರಿನ ಪ್ರಮುಖರು ಸೇರಿದಂತೆ ಸಮಿತಿ ರಚನೆ ಆಯ್ತು.

ಕೆಳಕೊಪ್ಪ ಶಾಲೆಯಲ್ಲಿ ಸೇರಿದ ಸಭೆಯಲ್ಲಿ ಇದೇ ಶಾಲೆಯ ಪಕ್ಕದಲ್ಲಿಯೇ ಪ್ರೌಢಶಾಲೆ ಕಟ್ಟಬಹುದೆಂದು ತೀರ್ಮಾನವಾಗಿದ್ದು ತಯಾರಿಸಿದ ರಿಕಾರ್ಡು ಸರ್ಕಾರಕ್ಕೆ ಹೋಯಿತು. ಆಗ ಗ್ರಾಮಾಡಳಿತ ಸಚಿವರಾಗಿದ್ದ ಬೇಗಾನೆ ರಾಮಯ್ಯನವರಿಗೆ ಅಡ್ಡಗದ್ದೆ ಗ್ರಾಮಸ್ಥರು ಸ್ಥಳ ಎಲ್ಲರಿಗೂ ಅನುಕೂಲಕರವಾಗಿಲ್ಲ ಎಂದು ದೂರು ಕೊಟ್ಟರು.

ಎರಡನೆಯ ಬಾರಿ, ಒಂದು ತಿಂಗಳ ಅವಧಿಯಲ್ಲಿ ಈ ಭಾಗದ ಎಲ್ಲಾ ಜನರನ್ನು ಭೇಟಿ ಮಾಡಿ ಅವರುಗಳ ಬಹುಮತದ ಅಭಿಪ್ರಾಯದಂತೆ ಹಾಗೂ ಶಾಲೆ ಮಂಜೂರಾತಿಗೆ ಹರಿಜನ–ಗಿರಿಜನರು ಹೆಚ್ಚಾಗಿ ವಾಸಿಸುವ ಪ್ರದೇಶಕ್ಕೆ ಆದ್ಯತೆ ಕೊಡುತ್ತಿದ್ದುದರಿಂದ ಅವರು ಹೆಚ್ಚಾಗಿರುವ ಬಿಲಗದ್ದೆ, ಕಾವಡಿ, ಅಡ್ಡಗದ್ದೆ ಗ್ರಾಮಗಳಿಗೆ ಕೇಂದ್ರವಾಗಿ ಹೊಸ ಸ್ಥಳ ನಿರ್ಧರಿಸಿ ಅದರಂತೆ ಮಂಜೂರಾತಿ ಸಿಕ್ಕಿರುತ್ತೆ.

ಈಗ ಮಕ್ಕಳ ಸಂಖ್ಯೆಯೂ ಸಾಕಷ್ಟಿದ್ದು, ಶಾಲೆ ನಡೆಸಲು ಸರ್ಕಾರಕ್ಕೆ ಯಾವ ಕುಂದು ಕೊರತೆಯೂ ಉಂಟಾಗಿಲ್ಲ. ಇದು ಈಗ ಮುಗಿದುಹೋದ ಕತೆ. ನೀವೇ ಒಮ್ಮೆ ಖುದ್ದು ಭೇಟಿ ನೀಡಿ, ಎಲ್ಲ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳಬಹುದು.

**—ಕೆ. ಮರಿಯಪ್ಪಗೌಡ,**
ಪ್ರೌಢಶಾಲಾ ಸಮಿತಿ ಅಧ್ಯಕ್ಷ,
ತೊರೆಹಡ್ಲು.

## "ಗುಡಿಬಂಡೆ ಚಿಕಿತ್ಸೆ"

(೨ನೇ ಪುಟದಿಂದ)

ಕೊಡಲು ಒಪ್ಪಿದ್ದ ೨೦೦ ರೂಪಾಯಿಗಳನ್ನಾದರೂ ಈಗ ಕೊಡಬೇಕೆಂದು ಕೇಳಿದನು. ಆದರೆ ಅವರು ಒಂದೇ ಒಂದು ಪೈಸೆಯನ್ನೂ ನೀಡಬಾರದೆಂದು ಅಲ್ಲಿ ನೆರೆದವರೆಲ್ಲರೂ ಒಕ್ಕೊರಲಿನಿಂದ ಹೇಳಿದುದರಿಂದ ನಾರಾಯಣಸ್ವಾಮಿಯವರು ಯಾವ ಲಂಚವನ್ನೂ ನೀಡಲಿಲ್ಲ.

ಅಂತೂ ಬಳಕೆದಾರರು ಒಂದುಗೂಡಿದರೆ ಕೇವಲ ಅಹಿಂಸೆಯಿಂದಲೇ ಲಂಚಕೋರರನ್ನು ಸೋಲಿಸಬಹುದೆಂಬುದು ಅಂದಿನ ಘಟನೆಯಿಂದ ಸ್ಪಷ್ಟವಾಯಿತು.

ಗುಡಿಬಂಡೆಯಲ್ಲಿ ಸಲ್ಲುವುದು ಕೊಪ್ಪದಲ್ಲೂ ಎಲ್ಲೆಲ್ಲಿಯೂ ಸಲ್ಲುವುದಲ್ಲವೆ?

(—"ಬಳಕೆದಾರರ ವೇದಿಕೆ" ಪತ್ರಿಕೆಯಿಂದ)

## ನಾಪತ್ತೆಯಾದ ಜನತಾ ಮನೆ!

(ವರದಿ: **ಮಾ. ಶೀ. ಗ.**)

ಮೇಲುಬೆಳ್ರೆ: ಇಲ್ಲಿನ ಹರಿಜನ ಕಾಲೋನಿಯಲ್ಲಿ ಸುಮಾರು ಏಳೆಂಟು ವರ್ಷಗಳ ಹಿಂದೆ ನಿರ್ಮಿಸಿದ್ದ ಗೋಡೆ ರಹಿತ ಜನತಾ ಮನೆಯೊಂದು ನಾಪತ್ತೆಯಾಗಿದೆ.

ಸಮೀಪದ ದಾಸನ ಕೊಡಿಗೆಯ ಚಂದ್ರಶೇಖರ್ ಎಂಬವರ ಹೆಸರಿಗೆ ಮಂಜೂರಾಗಿದ್ದನ್ನಲಾದ ಈ ಮನೆಯಲ್ಲಿ ಸೋಮಿ ಎಂಬ ಹರಿಜನ ಮುದುಕಿಯೊಬ್ಬರು ವಾಸವಾಗಿದ್ದರು. ಇದು ಕಳೆದ ಮಳೆಗಾಲದಲ್ಲಿ ಜಖಂ ಆದ ಪರಿಣಾಮವಾಗಿ ಆ ಮನೆ ಖಾಲಿಯಾಗಿತ್ತು.

ಮನೆಯ ವಾರಸುದಾರ ಚಂದ್ರಶೇಖರ್ ಈಗಾಗಲೇ ಮರಣಹೊಂದಿದ್ದು ಈ ಮನೆಯನ್ನು ಅವರ ಕುಟುಂಬದವರು ಕಿತ್ತು, ಸಾಗಿಸಿದ್ದಾರೆನ್ನಲಾಗಿದೆ. "ಈ ಕೃತ್ಯ ಕಾನೂನು ಬಾಹಿರ; ಈ ಮನೆಯನ್ನು ಕಿತ್ತು ಸಾಗಿಸಲು ಚಂದ್ರಶೇಖರ್ ಕುಟುಂಬದವರಿಗೆ ಹಕ್ಕಿಲ್ಲ. ಈ ಬಗ್ಗೆ ಸಂಬಂಧಪಟ್ಟವರು ತನಿಖೆ ನಡೆಸಲಿ" ಎಂದು ಊರಿನ ಹಲವರ ಆಶೆವಾಲು.

ಈ ಬಗ್ಗೆ ಕೊಪ್ಪ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿ ತಿಂಗಳುಗಳೇ ಕಳೆದಿದ್ದರೂ ಯಾವುದೇ ತನಿಖೆ ನಡೆದಿಲ್ಲವೆಂದು ಗೊತ್ತಾಗಿದೆ.

## ಭಾರತದ ವಿದೇಶಿ ಸಾಲದ ಹೊರೆ ಇಷ್ಟು

ಮುಂದಿನ ಹತ್ತು ವರ್ಷಗಳಲ್ಲಿ ಭಾರತ ಸುಮಾರು ೧೨,೦೦೦ ಕೋಟಿ ರೂ. ಗಳ (ವಿದೇಶಿ) ಸಾಲ ತೀರಿಸಬೇಕಿದೆ. ಇದು ಕೇಂದ್ರ ಸರ್ಕಾರಿ ಅಧೀನದ ಕೈಗಾರಿಕೋದ್ಯಮಗಳ ಮೇಲೆ ಹೂಡಿರುವ ಒಟ್ಟು ಬಂಡವಾಳದ ಅರರಷ್ಟಾಗುತ್ತದೆ. ಈ ಅವಧಿಯಲ್ಲಿ ಸಾಲದ ಮೇಲಿನ ಬಡ್ಡಿಯೇ ೩,೦೦೦ ದಿಂದ ೩,೪೦೦ ಕೋಟಿ ರೂ. ಗಳಷ್ಟಾಗುತ್ತದೆ.

ಸಾಲವನ್ನಾಗಲಿ ಬಡ್ಡಿಯನ್ನಾಗಲಿ ಮರುಪಾವತಿ ಮಾಡದೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ರಾಷ್ಟ್ರದ ರಫ್ತಿನಿಂದ ಬರುವ ವಿದೇಶಿ ವಿನಿಮಯದಲ್ಲಿ ಶೇ. ೧೧ ರಷ್ಟನ್ನು ಕೇವಲ ಸಾಲ ಮರುಪಾವತಿಗಾಗಿಯೇ ವಿನಿಯೋಗಿಸಬೇಕು. ಆದರೆ ಈಗ ರಾಷ್ಟ್ರದ ರಫ್ತು ಕೂಡ ಆಶಾದಾಯಕವಾಗಿಲ್ಲ.

ಈ ಹಣವನ್ನು ೧೯೮೩–೮೪ನೇ ಸಾಲಿನಿಂದ ಮರುಪಾವತಿ ಮಾಡಬೇಕಿದೆ. ಆ ವರ್ಷ ಅಸಲು ೫೫೮.೫೨ ಕೋಟಿ ರೂ., ಬಡ್ಡಿ ೩೪೮.೯೮ ಕೋಟಿ ರೂ., ಒಟ್ಟು ಮರುಪಾವತಿ ಮೊತ್ತ ೯೮೫.೪೩ ಕೋಟಿ ರೂ. ಗಳಾದರೆ ೮೮–೮೯ ರಲ್ಲಿ ಈ ಮೊತ್ತ–ಒಟ್ಟು ೧೧೦೬.೦೬ ಕೋಟಿ ರೂ.ಗೆ ಏರಿ ೧೯೯೩–೯೪ ರಲ್ಲಿ ೯೩೦.೩೫ ಕೋಟಿ ರೂ. ಗೆ ಇಳಿಯುತ್ತದೆ.

(ಆಧಾರ: 'ಪ್ರಜಾವಾಣಿ' ೧೭–೮–೮೩)

# ಉಪಾಧ್ಯಾಯರ ಒಳ ಜಗಳ

(೧ ನೇ ಪುಟದಿಂದ)

**ಹಿರಿತನದ ಪ್ರಶ್ನೆ**

ಇನ್ನು ನಾಲ್ಕಾರು ತಿಂಗಳಲ್ಲಿ ನಿವೃತ್ತರಾಗಲಿರುವ ಇನ್ನೊಬ್ಬ ಹಿರಿಯ ಅಧ್ಯಾಪಕ ವೆಂಕಟರಾಮ್ ಕಳೆದ ವರ್ಷ ಮುಖ್ಯೋಪಾಧ್ಯಾಯರಾಗಿ ನಿಯುಕ್ತರಾದಾಗ ಶಾಲಾಭಿವೃದ್ಧಿ ಸಮಿತಿಯವರು ಅದನ್ನು ವಿರೋಧಿಸಿದರು. ಈ ಹಿಂದೆ ಅವರು ಆ ಹುದ್ದೆಯಲ್ಲಿದ್ದಾಗ ಶಾಲೆಯ ಹಣ ದುರುಪಯೋಗ ಮಾಡಿದ್ದರೆಂಬುದು ಅವರ ವಿರೋಧಕ್ಕೆ ಕಾರಣ. ಈಗ, ನ್ಯಾಯವಾಗಿ ತನಗೇ ಆ ಹುದ್ದೆ ದೊರೆಯಬೇಕೆಂಬ ವೆಂಕಟರಾಮ್ ಅವರ ತಗಾದೆ ಈ ಎಲ್ಲ ಜಗಳಗಳಿಗೆ ಪ್ರಾರಂಭ ಎನ್ನಲಾಗಿದೆ. ಆಗಸ್ಟ್ ೧೫ ರಿಂದ ಜಗಳಗಳು ತೀವ್ರವಾಗಿವೆ.

**ಹಣ 'ಗುಳುಂ' ಪತ್ತೆ!**

ಹಿಂದೆ ಮುಖ್ಯೋಪಾಧ್ಯಾಯರಾಗಿದ್ದು ಈಗ ಸಹೋಪಾಧ್ಯಾಯರಾಗಿರುವ ವಿ. ಆರ್. ಪ್ರಭಾಕರ್ ಎಂಬವರು ೬೬೨ ರೂ.ಗಳನ್ನು ದುರುಪಯೋಗ ಪಡಿಸಿರುವುದು ಶಿಕ್ಷಣಾಧಿಕಾರಿಗಳ ಹೋದ್ನಿಯ ತನಿಖೆ ಸಂದರ್ಭದಲ್ಲಿ ಬೆಳಕಿಗೆಬಂತೆನ್ನಲಾಗಿದೆ. ಈ ಬಗ್ಗೆ ಅಧಿಕಾರಿಗಳ ಪ್ರಶ್ನೆಗೆ ಸೂಕ್ತ ಸಮಜಾಯಿಷಿ ಕೊಡದ ಅವರು ಸೌಜನ್ಯದಿಂದ ಸಹ ಉತ್ತರಿಸಿಲ್ಲವೆನ್ನಲಾಗಿದೆ.

**ಬೇಸತ್ತ ಶಿಕ್ಷಣಾಧಿಕಾರಿ**

ವಯಸ್ಸಿನಲ್ಲೂ, ಅನುಭವ ಮತ್ತು ಸೇವಾ ಅವಧಿಗಳ ದೃಷ್ಟಿಯಿಂದಲೂ ಸಾಕಷ್ಟು ಹಿರಿಯರಾದ ಶ್ರೀಮತಿ ಅಶೋಕಕುಮಾರಿಯವರು ೨ ದಿನ ತನಿಖೆ–ಮಾತು ಕತೆ ನಡೆಸಿದರೂ ಅಧ್ಯಾಪಕರುಗಳಲ್ಲಿ ಹೊಂದಾಣಿಕೆ ತರಲು ವಿಫಲರಾದರೆಂದೂ, ಅವರ ಮೃದು ಸ್ವಭಾವವನ್ನು ದುರುಪಯೋಗಪಡಿಸಿಕೊಂಡ ಅಧ್ಯಾಪಕರು ಮನ ಬಂದಂತೆ ಮಾತಾಡಿದರೆಂದೂ ಹೇಳಲಾಗಿದೆ. ಬೇಸತ್ತ ಅಧಿಕಾರಿ ಕಡೆಗೆ, "ನನ್ನ ಹಿರಿತನಕ್ಕೆ ನೀವು ಬೆಲೆ ಕೊಡುವುದಿಲ್ಲವೆಂದಾದರೆ ಇಲಾಖಾ ನಿಯಮದಂತೆ ಏನು ಮಾಡಬೇಕೋ ಅದನ್ನೇ ಮಾಡುತ್ತೇನೆ" ಎಂದು ಹೇಳಿ ಹೋದರೆನ್ನಲಾಗಿದೆ.

**ಬೇಲಿಯೇ ಹೊಲ ಮೇದಂತೆ**

ಮಕ್ಕಳಿಗೆ ಹಿತವಚನ ಹೇಳಲು ಸಂಬಳ ಕೊಟ್ಟು ಉಪಾಧ್ಯಾಯರುಗಳನ್ನು ನೇಮಿಸಿದರೆ, ಅವರುಗಳಿಗೇ ಯಾರಾದರೂ ಬುದ್ಧಿ ಹೇಳಬೇಕಾದ ಪ್ರಸಂಗ ಬಂದಿರುವುದು ಎಂಥ ದುರಂತ!

---

# ಸ್ವಾತಂತ್ರ್ಯ ದಿನಾಚರಣೆ

**ಅದ್ದಡ**

ಇಲ್ಲಿನ ಹಿ. ಪ್ರಾ. ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಎಲ್. ಗೋಪಾಲರಾವ್ ರಾಷ್ಟ್ರಧ್ವಜ ಅರಳಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಲಾ ಬಾಲಸಭಾ ಅಧ್ಯಕ್ಷ ಸಿ. ಸಿ. ಶೃಂಗೇಶ್ವರ ಮತ್ತು ಮುಖ್ಯೋಪಾಧ್ಯಾಯ ದೂಮಪ್ಪ ಅವರುಗಳು ಸ್ವಾತಂತ್ರ್ಯ ದಿನದ ಮಹತ್ವ ಕುರಿತು ಮಾತನಾಡಿದರು. ಶಾಲಾ ಬಾಲಕಿಯರಿಂದ ಮನರಂಜನೆ ಕಾರ್ಯಕ್ರಮ ನಡೆಯಿತು. ಮುಖ್ಯೋಪಾಧ್ಯಾಯರು ಸಭೆಗೆ ವಂದಿಸಿದರು.

**ಮೆಣಸಿನಹಾಡ್ಯ**

ಗಿರಿಜನರ ಹಳ್ಳಿಯಾದ ಇಲ್ಲಿ ಯುವಕ ರೈತ ಸಂಘ, ಮಹಿಳಾ ಸಮಾಜ ಮತ್ತು ಶಾಲಾ ಸಮಿತಿಯವರು ಒಟ್ಟಾಗಿ ಸ್ವಾತಂತ್ರ್ಯ ದಿನವನ್ನು ಸಂಭ್ರಮದಿಂದ ಆಚರಿಸಿದರು.

ಶ್ರೀಮತಿ ಕಿಟ್ಟಮ್ಮ ಧ್ವಜಾರೋಹಣ ಮಾಡಿದರು. ಪಿ. ಕೆಂಪೇಗೌಡ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಮಾತನಾಡಿದ ಕೆ. ಗೋಪಾಲರಾವ್, ಜಿ. ವಿ. ಕೆಂಪೇಗೌಡ, ಪಿ ಶೇಷಯ್ಯ, ಜಿ. ಡಿ. ನಾಗೇಗೌಡ ಅವರುಗಳು, ಸರ್ಕಾರದ ಗಿರಿಜನ ಅಭಿವೃದ್ಧಿ ಯೋಜನೆಯಲ್ಲಿ ವಿವಿಧ ಇಲಾಖೆಗಳ ಮೂಲಕ ತಮ್ಮ ಹಳ್ಳಿಯವರೆಲ್ಲ ಪಡೆದು ಸದುಪಯೋಗಪಡಿಸಿಕೊಂಡಿರುವ ಸೌಲಭ್ಯಗಳನ್ನೂ, ವಿದ್ಯಾಭ್ಯಾಸದಲ್ಲೂ, ಜೀವನ ಮಟ್ಟದಲ್ಲೂ ಹಳ್ಳಿಯ ಜನ ಮುಂದುವರಿಯುತ್ತಿರುವುದನ್ನೂ ಪ್ರಸ್ತಾಪಿಸಿ, ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಪೋಷಕರೂ ಶಾಲಾ ಉಪಾಧ್ಯಾಯರೂ ಹೆಚ್ಚು ಸಹಕರಿಸಬೇಕೆಂದರು.

ಜಿ. ಡಿ. ಗೋಪಾಲಗೌಡ ಸ್ವಾಗತಿಸಿ ಜಿ. ಕೆಂಪೇಗೌಡ ವಂದಿಸಿದರು.

# ವಯಸ್ಕರ ಶಿಕ್ಷಣ ಶಾಲೆ ಉದ್ಘಾಟನೆ

ಹಾಲ್ಮುತ್ತೂರು: ಇಲ್ಲಿನ ಹಿ. ಪ್ರಾ. ಶಾಲೆಯ ಆವರಣದಲ್ಲಿ ಆ. ೧೭ ರಂದು ಜಯರಾಮ ಜೋಯ್ಸ್ ಅಧ್ಯಕ್ಷತೆಯಲ್ಲಿ ವಯಸ್ಕರ ಶಿಕ್ಷಣ ಶಾಲೆಯನ್ನು ಶಾಲಾ ಮುಖ್ಯೋಪಾಧ್ಯಾಯ ಹೆಚ್. ಗಂಗಾಧರಯ್ಯ ಉದ್ಘಾಟಿಸಿದರು. ಹೆಚ್. ಎಸ್. ಗೋಪಾಲಕೃಷ್ಣಯ್ಯ ಮುಖ್ಯ ಅತಿಥಿಗಳಾಗಿದ್ದರು. ಹೆಚ್. ಡಿ. ಶ್ರೀನಿವಾಸ್ ಮತ್ತು ಚಾವಲ್ಮನೆ ಸುರೇಶ್‌ನಾಯ್ಕ್ ವಯಸ್ಕರ ಶಿಕ್ಷಣದ ಅಗತ್ಯ ಮತ್ತು ಉಪಯೋಗ ಕುರಿತು ಮಾತನಾಡಿದರು. ಸುರೇಶ್‌ನಾಯ್ಕ್ ಸ್ವಾಗತಿಸಿ, ರೇಣುಕಾ ವಂದಿಸಿದರು.

# ಕೊಪ್ಪ ಕಿರಿಯ ಕಾಲೇಜಿನ ವಿದ್ಯಾರ್ಥಿ ಸಂಘ ಉದ್ಘಾಟನೆ

ಕೊಪ್ಪ: ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನ ವಿದ್ಯಾರ್ಥಿ ಸಂಘವನ್ನು ಆ. ೨೪ ರಂದು ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನ ಉಪನ್ಯಾಸಕ ಹೆಚ್. ಎಲ್. ಸುಬ್ರಹ್ಮಣ್ಯ ಉದ್ಘಾಟಿಸಿದರು. ನಿವೃತ್ತ ಪ್ರಾಂಶುಪಾಲ ಕೆ. ಎಸ್. ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಪ್ರಾಂಶುಪಾಲ ಎಸ್. ಎಸ್. ಕಿರಗಿಯವರು ಸ್ವಾಗತಿಸಿ ಉಪನ್ಯಾಸಕ ಎ.ಜಿ.ಸುಬ್ರಮಣ್ಯ ವಂದಿಸಿದರು. ವಿದ್ಯಾರ್ಥಿ ಕಾರ್ಯದರ್ಶಿ ಯು. ಬಿ. ಮೋಹನ್‌ವರದಿ ಓದಿದರು. ಮನರಂಜನಾ ಕಾರ್ಯಕ್ರಮಗಳು ಉತ್ತಮವಾಗಿದ್ದವು.

# ಲೋ. ಇಲಾಖೆ ನಿರ್ಲಕ್ಷ್ಯ: ಬಿದರಗೋಡಿನಲ್ಲಿ ಕೊಳೆತು ನಾರುವ ಕೆಸರು ಗುಂಡಿ

**(ನಮ್ಮ ಪ್ರತಿನಿಧಿಯಿಂದ)**

ಬಿದರಗೋಡು: ಇಲ್ಲಿನ [illegible] ಮುಂಭಾಗದಲ್ಲಿ (ಬಸ್‌ಗಳು [illegible] ಹೋಟೇಲಿರುವ ಸ್ಥಳ) ಇದ್ದ [illegible] ೪ ವರ್ಷದಿಂದ ರಿಪೇರಿಯಿಲ್ಲದೆ [illegible] ಹಿಂದೆ ಚರಂಡಿಯಿದ್ದ ಗುರುತೂ ಇಲ್ಲದೆ [illegible]ದೊಂದು ಕೊಳೆತು ನಾರುವ ಕೆಸರುಗುಂಡಿಯಾಗಿದೆ. ಇದರಿಂದ ಆ ರಸ್ತೆಯಲ್ಲಿ [illegible]ಡುವವರಿಗೆ, ಅಲ್ಲಿ ಬಸ್ ಕಾಯುವ ಪ್ರಯಾಣಿಕರಿಗೆ ಹಾಗೂ ಅಲ್ಲಿನ ನಿವಾಸಿಗಳಿಗೆ ವಿಪರೀತ ತೊಂದರೆಯಾಗುತ್ತಿದೆ.

ಈ ಪ್ರದೇಶ ಲೋಕೋಪಯೋಗಿ ಇಲಾಖೆಯ ಕೊಪ್ಪ ವಿಭಾಗಕ್ಕೆ ಸೇರಿದ್ದೆಂದು ಬಿದರಗೋಡು ಪಂಚಾಯ್ತಿಯವರು (ತೀರ್ಥಹಳ್ಳಿ ತಾ||) ಹೇಳಿದರೆ, ಕೊಪ್ಪ ಅಧಿಕಾರಿಗಳು ಅದು ತೀರ್ಥಹಳ್ಳಿ ವಿಭಾಗಕ್ಕೆ ಸೇರಿದ್ದೆನ್ನುತ್ತಾರೆ. ಕೆಲ ದಿನಗಳ ಹಿಂದೆ ಇಲ್ಲಿನ ಗ್ರಾಮಸ್ಥರು ಕೊಪ್ಪದ ಇಲಾಖಾ ಅಧಿಕಾರಿಗಳಿಗೆ ಈ ಬಗ್ಗೆ ಮನವರಿಕೆ ಮಾಡಿಕೊಟ್ಟಾಗ ಚರಂಡಿ ರಿಪೇರಿಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದ ಅವರು ನಂತರ ಈ ಕಡೆ ಗಮನ ಕೊಟ್ಟಿಲ್ಲ.

ಕೂಡಲೇ ಈ ಕೆಲಸ ಆಗಬೇಕೆಂದು ಊರವರು ಒತ್ತಾಯಿಸಿದ್ದಾರೆ.



ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್. ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ